**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.131/2020

**PW**. 3

**CW**. 9

**ಸಾಕ್ಷಿಯ ಹೆಸರು –ಕೆ ಬಿ ಗೀರೀಶ ಕುಮಾರ**

**ತಂದೆಯ ಹೆಸರು –ಎಂ ಎಂ ಬಸವರಾಜು**

**ವಯಸ್ಸು –44 ವರ್ಷಗಳು** ದಿನಾಂಕ 23–07–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಹೆಚ್ ಸಿ 05, ವರುಣ ಪೊಲೀಸ್ ಠಾಣೆ , ಮೈಸೂರು**

**ವಾಸಸ್ಥಳ –ಮೈಸೂರು**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ನಾನು 2009 ರಿಂದ ಮಾರ್ಚ 2014 ರವರೆಗೆ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಸೇವೆ ಸಲ್ಲಿಸಿರುತ್ತೇನೆ. 2014 ನೇ ಸಾಲಿನಲ್ಲಿ ಚಾಸಾ–1 ರವರು ಪಿ ಎಸ್ ಐ ಆಗಿದ್ದರು. ಚಾಸಾ–10 ಮತ್ತು 12 ರವರು ನನ್ನೊಂದಿಗೆ ಕೆಲಸ ಮಾಡುತ್ತಿದ್ದರು.

ದಿಃ 10–02–2014 ರಂದು ರಾತ್ರಿ ನಾನು, ಚಾಸಾ–1, 10 ಮತ್ತು 12 ರವರು ಕರ್ತವ್ಯ ನಿರ್ವಹಿಸುತ್ತಿರುವಾಗ ರಾತ್ರಿ 11.45 ಗಂಟೆಗೆ ಹುಣಸೂರು ಮೈಸೂರು ರಸ್ತೆಯ ಕೆ ಆರ್ ನಗರ ಜಂಕ್ಷಣ ಬಳಿ ನಾವು ವಾಹನ ತಪಾಸಣೆ ಮಾಡುವಾಗ, ಹುಣಸೂರು ಕಡೆಯಿಂದ ಒಂದು ಟಾಟಾ ಇಂಡಿಕಾ ಕಾರ ನಂ ಕೆ ಎ 45 5412 ಅತಿವೇಗವಾಗಿ ಚಾಲನೆ ಮಾಡಿಕೊಂಡು ಬರುತ್ತಿದ್ದು, ಚಾಸಾ–1 ರವರ ಸೂಚನೆ ಮೇರೆಗೆ ನಾವು ಸದರಿ ನಿಲ್ಲಿಸಲು ಸೂಚನೆ ನೀಡಿದೆವು. ಆದರೆ ಸದರಿ ಕಾರು ನಿಲ್ಲಿಸದೆ, ಕೆ ಆರ್ ನಗರ ರಸ್ತೆ ಕಡೆಗೆ ವೇಗವಾಗಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದರು. ನಾವು ಚಾಸಾ–1 ರವರ ಜೊತೆ ನಮ್ಮ ಇಲಾಖೆ ವಾಹನವಾದಲ್ಲಿ ಹಿಂಬಾಲಿಸಿಕೊಂಡು ಹೋದೆವು.

ಬೋಳನಹಳ್ಳಿ ಬಳಿ ಒಂದು ದಿಬ್ಬದ ಹತ್ತಿರ ಸದರಿ ಕಾರನ್ನು ನಿಲ್ಲಿಸಿ, ಕಾರನ ಚಾಲಕ ಸ್ಥಳದಿಂದ ಓಡಿ ಹೋಗಲು ಪ್ರಯತ್ನಪಟ್ಟಿದ್ದು, ಆಗ ನಾವೆಲ್ಲ ಸುತ್ತುವರಿದ ಆತನನ್ನು ಹಿಡಿದುಕೊಂಡೆವು. ಚಾಸಾ-1 ರವರು ಸದರಿ ಚಾಲಕನ ಹೆಸರನ್ನು ಕೇಳಿದಾಗ, ತಡವರಿಸುತ್ತ ಮಂಜುನಾಥ,ಕೆ ಆರ್ ನಗರ ಎಂದು ಹೇಳಿದ. ಮತ್ತೊಮ್ಮೆ ಕೇಳಿದಾಗ, ನಯಾಜ್ ಶರೀಫ್, ಪಾಂಡವಪುರ ,ಹಾಲಿ ವಾಸಃರಾಜೀವನಗರ ಮೈಸೂರು ಎಂದು ಹೇಳಿದ. ಕಾರಿನಲ್ಲಿ ಸ್ಫೋಟಕ ವಸ್ತುಗಳನ್ನು ಸಾಗಾಣಿಕೆ ಮಾಡುತ್ತಿದ್ದ ಕಾರಣ ವೇಗವಾಗಿ ಚಲಾಯಿಸಿಕೊಂಡು ಹೋದೆ ಎಂದು ಹೇಳಿದ. ಚಾಸಾ-1 ರವರು ಕಾರಿನ ಡಿಕ್ಕಿಯನ್ನು ಪರಿಶೀಲಿಸಿದಾಗ, ಎರಡು ಬಿಳಿ ಬಣ್ಣದ ಪ್ಲಾಸ್ಟಿಕ್ ಕವರ ಮತ್ತು 8 ನೀಲಿ ಕವರ ನಲ್ಲಿ ಅಕ್ರಮವಾಗಿ ಸ್ಫೋಟಕ ವಸ್ತುಗಳನ್ನು ಸಾಗಾಣಿಕೆ ಮಾಡುತ್ತಿದ್ದು ಕಂಡುಬಂತು. ನಂತರ ಆತನನ್ನು ವಶಕ್ಕೆ ಪಡೆದು, ಬಿಳಿಕೆರೆ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು, ಬೆಳಗ್ಗೆ 3.00 ರಿಂದ 4.00 ಗಂಟೆವರೆಗೆ ಚಾಸಾ-1 ರವರು ಪಂಚನಾಮೆ ಮಾಡಿ, ಸದರಿ ಕಾರಿನಲ್ಲಿದ್ದ ವಸ್ತುಗಳನ್ನು ಜಪ್ತಿ ಮಾಡಿದರು. ಸದರಿ ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ನಂತರ ಆರೋಪಿಯನ್ನು ದಸ್ತಗಿರಿ ಮಾಡಿ, ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇವೆ. ಸಾಕ್ಷಿಯು ಆರೋಪಿಯನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತಾರೆ. ಕಾರಿನಲ್ಲಿದ್ದ ಸ್ಫೋಟಕ ವಸ್ತುಗಳನ್ನು ಸಾಕ್ಷಿಯು ಫೋಟೋಗಳಲ್ಲಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-3 ರಿಂದ 7 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ- ಆರೋಪಿ ಪರ ಶ್ರೀ ಎಸ್ ಎನ್ ಪಿ ವಕೀಲರಿಂದಃ-**

ಆರೋಪಿ ರಾತ್ರಿ ವೇಳೆ ಯಾವುದೇ ವಾಹನವನ್ನು ಚಾಲನೆ ಮಾಡಿಕೊಂಡು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ತನ್ನ ವಾಹನದಲ್ಲಿ ಸ್ಫೋಟಕ ವಸ್ತುಗಳನ್ನು ಸಾಗಾಣಿಕೆ ಮಾಡುತ್ತಿದ್ದ

ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಆರೋಪಿಯನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿ–1 ರ ಪಂಚನಾಮೆಯನ್ನು ಮಾಡಿಲ್ಲ ಹಾಗೂ ಯಾವುದೇ ಸ್ಫೋಟಕ ವಸ್ತುಗಳನ್ನು ಜಪ್ತಿ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.